ಪ್ರಾಣಿಗಳೆಂದರೆ ಬೆರಗು ವ್ಯಕ್ತಪಡಿಸುತ್ತಿದ್ದ ಜೇನ್ ಆ ಪುಸ್ತಕ ಭಂಡಾರದಲ್ಲಿ 'ದಿ ಸ್ಟೋರಿ ಆಫ್ ಡಾ. ಡುಲಿಟಲ್, ದಿ ಜಂಗಲ್ ಬುಕ್' ಓದಿ ಆಫ್ರಿಕಾದಲ್ಲಿ ನೆಲೆಸುವ ಕನಸು ಕಂಡಳು. ಜೇನ್‌ಗೆ ಪ್ರಾಣಿಗಳತ್ತ ಎಲ್ಲಿಲ್ಲದ ಆಸ್ಥೆ, ಕುತೂಹಲ. ಆಕೆ ಪ್ರಾಣಿ ಜಗತ್ತಿನ ಅದ್ಭುತಗಳನ್ನು ಸೂಕ್ಷ್ಮವಾಗಿ ವೀಕ್ಷಿಸುವ ಹವ್ಯಾಸಿ ಪ್ರಕೃತಿ ಶಾಸ್ತ್ರಜ್ಞೆಯಾಗಿ ಬೆಳೆದಳು. ಓದಲು ಶುಲ್ಕ ಕಟ್ಟುವಷ್ಟು ಆರ್ಥಿಕ ಸ್ಥಿತಿ ಇರಲಿಲ್ಲ.

ಡಿಸೆಂಬರ್ 18. 1956ರ ಮುಂಜಾನೆ, ಜೇನ್‌ಗೆ ಕೀನ್ಯಾದಲ್ಲಿದ್ದ ಆಕೆಯ ಗೆಳತಿ ಪತ್ರ ಬಂತು. 'ಜೇನ್ ಇಲ್ಲಿಗೆ ಭೇಟಿ ಕೊಡುವೆಯಾ?' ಎಂದು ಆಕೆ ಕೇಳಿದ್ದಳು. ಹಡಗಿನ ಪ್ರಯಾಣದ ಟಿಕೆಟ್ ಬಲು ದುಬಾರಿ. ಜೇನ್ ಆಪ್ತ ಕಾರ್ಯದರ್ಶಿಯಾಗಿ, ಫಿಲ್ಮ್ ಸ್ಟುಡಿಯೊದಲ್ಲಿ ಸಹಾಯಕಳಾಗಿ, ಕಡೆಗೆ ಹೋಟೆಲುಗಳಲ್ಲಿ ಪರಿಚಾರಕಿಯಾಗಿ ದುಡಿದು, ಹಣವನ್ನು ಗಳಿಸಿದಳು. 23ರ ಹರೆಯದ ಜೇನ್ ಹಡಗಿನಲ್ಲಿ ಬಂದಿಳಿದಳು.

ಜೇನ್ ಪ್ರಸಿದ್ಧ ಮಾನವಶಾಸ್ತ್ರಜ್ಞ ಮತ್ತು ಪ್ರಾಚೀನ ಜೀವಶಾಸ್ತ್ರಜ್ಞ ಡಾ. ಲೂಯಿಸ್ ಎಸ್.ಬಿ. ಲೀಕೆಯನ್ನು ಭೆಟ್ಟಿಯಾದಳು. ಡಿಗ್ರಿ ಇಲ್ಲದಿದ್ದರೂ ಆಂಥ್ರೋಪಾಲಜಿ ಕುರಿತ ಆಕೆಯ ಅರಿವು ಲೂಯಿಗೆ ಅಚ್ಚರಿಯಾಯಿತು. ಲೂಯಿ, ಜೇನ್‌ಗೆ ತನ್ನ ಆಪ್ತ ಕಾರ್ಯದರ್ಶಿ ಕೆಲಸ ಕೊಟ್ಟರು. ಲೂಯಿ ಅವರಿಗೆ ಚಿಂಪಾಂಜಿಗಳನ್ನು ಕುರಿತು ವೈಜ್ಞಾನಿಕ ಅಧ್ಯಯನ ಮಾಡುವ ಉತ್ಸುಕತೆ ಇತ್ತು. ಅದು ಅತ್ಯಂತ ಕಷ್ಟದ ಅಧ್ಯಯನ, ಅಲ್ಲಿಯವರೆಗೂ ಚಿಂಪಾಂಜಿಗಳ ಬಗ್ಗೆ ಏನೊಂದೂ ತಿಳಿದಿರಲಿಲ್ಲ. ಅಂತಹ ಕ್ಷೇತ್ರಕಾರ್ಯಕ್ಕೆ ಬೇಕಾಗುವ ಮಾರ್ಗದರ್ಶಿ ಸೂತ್ರಗಳೂ ತಿಳಿದಿರಲಿಲ್ಲ. ಅಪಾಯಕಾರಿ ವನ್ಯ ಮೃಗಗಳಿರುವ ತಾಣದಲ್ಲಿ ಅಧ್ಯಯನ ನಡೆಯಬೇಕಿತ್ತು. ಜೇನ್ ಉತ್ಸಾಹದಿಂದ ಈ ಶೋಧಕ್ಕೆ ಸಿದ್ಧಳಾದಳು.



ಜೇನ್ ಗುಡಾಲ್ ಲೇಖಕಿ ನೇಮಿಚಂದ್ರ ಜೊತೆ

1960ರ ಈ ಸಮಯದಲ್ಲಿ, ಓರ್ವ ಎಳೆಯ ವಯಸ್ಸಿನ ಬಿಳಿಯ ಹುಡುಗಿ ಆಫ್ರಿಕಾದ ಅರಣ್ಯದೊಳಗೆ ಹೋಗುವುದು ಮಾತ್ರವಲ್ಲ, ಹೋಗಿ ತಂಗುವುದು ಊಹಿಸಲು ಅಸಾಧ್ಯವಿತ್ತು. ಅನುಮತಿ ನೀಡಲು ನಿರಾಕರಿಸಿದ ಸರ್ಕಾರ, ಲೂಯಿ ಬಿಡದ ಒತ್ತಾಯಕ್ಕೆ, 'ಜೇನ್ ತನ್ನೊಡನೆ ಯೂರೋಪಿನ ಸಂಗಾತಿ ಒಬ್ಬರನ್ನು ಜೊತೆಯಲ್ಲಿ ಕರೆದೊಯ್ಯಬೇಕೆಂದು ಷರತ್ತು ವಿಧಿಸಿ' ಅನುಮತಿ ನೀಡಿತು. ಅವಿವಾಹಿತ ಜೇನ್ ತನ್ನೊಡನೆ ಕಾಡಿನಲ್ಲಿ ಕೆಲವು ತಿಂಗಳಾದರೂ ತಂಗುವಂತಹ ವ್ಯಕ್ತಿಯನ್ನು ಎಲ್ಲಿಂದ ತರಬೇಕು? ಇಂತಹ ಸಮಯದಲ್ಲಿ ತಾಯಿ ವ್ಯಾನೆ ಮಗಳ ಈ ಅಪೂರ್ವ ಕ್ಷೇತ್ರಕಾರ್ಯಕ್ಕೆ ಜೊತೆ ನೀಡಲು ಹೊರಟಳು.

ಒಂದು ಲ್ಯಾಂಡ್ ರೋವರ್‌ನಲ್ಲಿ ತಾಯಿ ಮತ್ತು ಜೇನ್ ಕಿಗೋಮಾಗೆ ಬಂದಿಳಿದರು. ಅಲ್ಲಿಂದ ಟಾನ್ಗನೀಕಾ ಸರೋವರದಾಚೆ ದಟ್ಟ ಅರಣ್ಯ. ಅದು ಚಿಂಪಾಂಜಿಗಳ ವಾಸಸ್ಥಾನ. ತಾಯಿ ಮತ್ತು ಜೇನ್ ಸರೋವರವನ್ನು ದಾಟಿ ಅರಣ್ಯಕ್ಕೆ ಬಂದರು. ಆಗ ಹೊರ ಜಗತ್ತಿನಿಂದ ದೂರವಾಗಿದ್ದರು. ಕಡಿದಾದ ಬೆಟ್ಟ ಶಿಖರಗಳು, ಕಂದರಗಳು, ದಟ್ಟ ಅರಣ್ಯ. ತಮ್ಮ ಡೇರೆ ಬಿಡಿಸಿ, ತಾಯಿ ಕ್ಯಾಂಪ್‌ನಲ್ಲಿ ತಳವೂರುತ್ತಿದ್ದಂತೆ, ಜೇನ್ ಅರಣ್ಯ ಪ್ರವೇಶಿಸಿದ್ದಳು. ಬಂಡೆ ಮೇಲೆ ಕುಳಿತು ನೀಲ ಆಕಾಶ, ಆಳ ಕಣಿವೆ ನೋಡಿದಳು. 'ಗೋಂಬೆ' ಎನ್ನುವ ಆ ಸ್ಥಳದಲ್ಲಿ, ಜೇನಳಿಗೆ ಸ್ವರ್ಗ ಎಂದರೆ ಇದೇ ಇರಬೇಕು ಎಂದು ಅನಿಸಿತ್ತು.

ಒಂದು ದಿನ ಜೇನ್, ಸರೋವರದಿಂದ ಐನೂರು ಅಡಿ ಎತ್ತರದಲ್ಲಿ ಇದ್ದ ಗುಡ್ಡದ ತುದಿಯಲ್ಲಿ ಏರಿ ಕುಳಿತಳು. ಕೆಳಗಿನ ಕಾಸಕೇಳ ಕಣಿವೆಯಲ್ಲಿ ಜೇನ್‌ಗೆ ಚಿಂಪಾಂಜಿಗಳ ಸದ್ದು ಕೇಳಿಸಿತು. ನೋಡುತ್ತಾಳೆ, ಅವು ದೊಡ್ಡ ಅತ್ತಿ ಮರದಲ್ಲಿ ಹಣ್ಣುಗಳನ್ನು ತಿನ್ನುತ್ತಾ ಕುಳಿತಿದ್ದವು. ಮೂರು ತಿಂಗಳು ಕಳೆದಿತ್ತು. ಒಂದು ಮಧ್ಯಾಹ್ನ, ದಟ್ಟ ಹುಲ್ಲುಮೆದೆಯ ನಡುವೆ ಸದ್ದಿಲ್ಲದೆ ತೆವಳುತ್ತಾ ಹೊರಟವಳು, ಎತ್ತರದ ಹುಲ್ಲಿನ ನಡುವೆ ಏನೋ ಚಲಿಸಿದಂತೆ ಕಂಡು, ಸ್ತಬ್ಧಳಾಗಿ ನೋಡಿದಳು. ನಲವತ್ತು ಗಜದಷ್ಟು ದೂರದಲ್ಲಿ ಗಂಡು ಚಿಂಪಾಂಜಿ ಕಂಡಿತು. ಅದರ ಗಲ್ಲದಲ್ಲಿ ಇಳಿಬಿದ್ದ ಬಿಳಿಗೂದಲನ್ನು ನೋಡಿ ಅದಕ್ಕೆ 'ಡೇವಿಡ್ ಗ್ರೇಬಿಯರ್ಡ್' ಎಂದು ಹೆಸರಿಟ್ಟಿದ್ದಳು.

ಡೇವಿಡ್ ಹುತ್ತದೊಳಗಿನಿಂದ ಗೆದ್ದಲು ಹುಳಗಳನ್ನು ಹಿಡಿಯುತ್ತಿದ್ದ. ಅದಕ್ಕಾಗಿ ಸರಳ ಸಲಕರಣೆಯನ್ನು ತಯಾರಿಸಿದ್ದ. ಗಿಡದ ಒಂದು ಸಣ್ಣ ಕಡ್ಡಿಯನ್ನು ಮುರಿದುಕೊಂಡು ಅದರ ಎಲೆಗಳನ್ನು ತೆರೆದುಹಾಕಿ, ಅದನ್ನು ಹುತ್ತದ ತೂತಿನ ಒಳಕ್ಕೆ ತೂರಿಸಿದ್ದ. ಗೆದ್ದಲು ಕಡ್ಡಿಯ ಮೇಲೆ ಹತ್ತಿ ಮೆತ್ತಿಕೊಳ್ಳುತ್ತಿದ್ದವು. ಥಟ್ಟನೆ ಚಿಂಪಾಂಜಿ ಕಡ್ಡಿಯನ್ನು ಹೊರಗೆಳೆದು ಬಾಯಿಗೆ ಹಿಡಿದು, ನಾಲಗೆಯಿಂದ ಗೆದ್ದಲು ಹುಳಗಳನ್ನೆಲ್ಲ ಸವರಿ ನೆಕ್ಕಿ ಚಪ್ಪರಿಸಿತ್ತು. ಜೇನ್ ಬೆರಗಾಗಿ ನೋಡಿದಳು. ಅಂದರೆ 'ವಸ್ತುವನ್ನು ಪರಿವರ್ತಿಸುವ, ಸಲಕರಣೆಗಳನ್ನು ತಯಾರಿಸುವ – ಟೂಲ್ ಮೇಕಿಂಗ್ ವರ್ತನೆ'ಯನ್ನು ಚಿಂಪಾಂಜಿಗಳಲ್ಲಿ ಗುರುತಿಸಿದ್ದಳು! ಅಲ್ಲಿಯವರೆಗೂ ಪ್ರಕೃತಿಯಲ್ಲಿ ಮನುಷ್ಯ ಮಾತ್ರ ಸಲಕರಣೆಗಳನ್ನು ತಯಾರಿಸಬಲ್ಲ ಎಂದು ನಂಬಿ 'ಮ್ಯಾನ್ ದಿ ಟೂಲ್ ಮೇಕರ್' ಎಂದು ಸಾರಿತ್ತು ವಿಜ್ಞಾನ ಜಗತ್ತು! ಜೇನ್ ಚಿಂಪಾಂಜಿಗಳು ಕೂಡ ಸಲಕರಣೆಗಳನ್ನು ಮಾಡುತ್ತವೆ ಎಂಬುದನ್ನು ಸಾಬೀತುಪಡಿಸಿದ್ದಳು.

ಜೇನ್‌ಳ ಅಗಾಧ ಶ್ರಮ ಚಿಂಪಾಂಜಿಗಳ ಕುರಿತಂತೆ ದಿಗ್ಭ್ರಮೆಯ ಸತ್ಯಗಳನ್ನು ಹೊರಹಾಕಿತು. ಮಾನವ ವಿಕಾಸದ ಹಾದಿಯತ್ತ ಬೆಳಕು ಚೆಲ್ಲಿತು. ಆಫ್ರಿಕಾದ ಕಾಡುಗಳಲ್ಲಿ ಚಿಂಪಾಂಜಿಗಳ ಬಗ್ಗೆ ನಿಕಟವಾಗಿ ಜೇನ್ ಅಧ್ಯಯನ ಮಾಡಿದ್ದಳು. 1963ರಲ್ಲಿ, ನ್ಯಾಷನಲ್ ಜಿಯಾಗ್ರಫಿಕ್ ಪತ್ರಿಕೆ ಆಕೆಯ ಅಧ್ಯಯನಕ್ಕೆ ಸಂಬಂಧಿಸಿ 37 ಪುಟಗಳ ಲೇಖನವನ್ನು ಪ್ರಕಟಿಸಿತ್ತು. ■

## ಬೆಂಗಳೂರಿನ ಕಬ್ಬನ್ ಕಾಡಿನಲ್ಲಿ ಜೇನ್

2003ರ ಆರಂಭದಲ್ಲಿ ಜೇನ್ ಗುಡಾಲ್ ಪ್ರಥಮ ಬಾರಿಗೆ ಬೆಂಗಳೂರಿಗೆ ಬಂದರು. 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್'ನ ತುಂಬಿ ತುಳುಕಿದ ಸಭಾಂಗಣದಲ್ಲಿ ಮಾತನಾಡಿದರು. ಪ್ರೀತಿ, ಕರುಣೆ, ಶಾಂತಿ ಮೇಳೈಸಿದ ಆ ಸ್ವರದಲ್ಲಿ ಮಾಂತ್ರಿಕ ಶಕ್ತಿಯಿತ್ತು. 'ನಿಮ್ಮ ಒಂದು ಸಂದರ್ಶನ ಬೇಕು' ಎಂದು ನಾನು ಕೇಳಿಕೊಂಡೆ. ಅವರು ಅಲ್ಲಿಂದ ಕಬ್ಬನ್ ಪಾರ್ಕಿನ ಸ್ಟೇಡಿಯಂಗೆ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಲು ತಲುಪಬೇಕಿತ್ತು. ಬಿಡುವಿಲ್ಲದ ಈ ಸರಳ ವಿಜ್ಞಾನಿ ಅಲ್ಲಿಯೇ ಮೆಟ್ಟಲಿನ ಮೇಲೆ ಕುಳಿತು ನನಗೆ ಸಂದರ್ಶನ ನೀಡಿದರು!

ಅವರ ಪುಸ್ತಕ 'ರೀಸನ್ ಫಾರ್ ಹೋಪ್' ಆಗಷ್ಟೇ ಬಿಡುಗಡೆಯಾಗಿತ್ತು. 'ಅರಣ್ಯಗಳು ಕಾಣೆಯಾಗುತ್ತಿವೆ. ಮರಳುಗಾಡು ಹಿಗ್ಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿಯೂ ಭರವಸೆಗೆ ಕಾರಣವಿದೆಯೆ?' ಎಂದು ನಾನು ಕೇಳಿದ್ದೆ. 'ಮನುಷ್ಯ ಮನಸ್ಸು ಮಾಡಿದರೆ ನಮ್ಮ ಪರಿಸರವನ್ನು ಉಳಿಸಿಕೊಳ್ಳುವ ಮಾರ್ಗವನ್ನು ಕಂಡುಹಿಡಿಯಬಲ್ಲ. ನಾನೆಂದೂ ಭರವಸೆ ಕಳೆದುಕೊಳ್ಳುವುದಿಲ್ಲ' ಎಂದು ಹೇಳಿದ್ದರು. 'ನನ್ನೊಬ್ಬನಿಂದ ಏನಾಗುತ್ತದೆ, ನಾನೊಬ್ಬಳು ಏನು ಮಾಡಲು ಸಾಧ್ಯ? ಎಂದು ಹತಾಶರಾಗಬೇಡಿ' ಎಂದು ಅವರು ಹೇಳಿದರು. 'ನಿಮ್ಮಿಂದ, ನಿಮ್ಮೊಬ್ಬರಿಂದ ಎಲ್ಲವೂ ಸಾಧ್ಯ. ನಾನು ಪ್ರಾಣಿಗಳನ್ನು ಕೊಂದು ತಯಾರಿಸಿದ ಪದಾರ್ಥಗಳನ್ನು ಕೊಳ್ಳುವುದಿಲ್ಲ. ಪರಿಸರವನ್ನು ಹಾಳು ಮಾಡುವಂತಹ ಪದಾರ್ಥಗಳನ್ನು ಬಳಸುವುದಿಲ್ಲ ಎಂದು ನಿರ್ಧರಿಸಿ. ಆಯ್ಕೆ ನಿಮ್ಮ ಕೈಯಲ್ಲಿದೆ, ಈ ಭೂಮಿಯನ್ನು ಉಳಿಸಿಕೊಳ್ಳುವ ಆಯ್ಕೆ'.

ಜೇನ್ ಗುಡಾಲ್ ಒಟ್ಟು 32 ಪುಸ್ತಕಗಳನ್ನು ಬರೆದಿದ್ದಾರೆ, ಅವುಗಳಲ್ಲಿ 15 ಮಕ್ಕಳಿಗಾಗಿ ಬರೆದವು. ಆಕೆಯ ಕೊನೆಯ ಪುಸ್ತಕ 'ದಿ ಬುಕ್ ಆಫ್ ಹೋಪ್: ಎ ಸರ್ವೈವಲ್ ಗೈಡ್ ಫಾರ್ ಟ್ರೈಯಿಂಗ್ ಟೈಮ್ಸ್', 2021ರಲ್ಲಿ ಪ್ರಕಟವಾಗಿತ್ತು. ಮಾನವಜನಾಂಗದ ಭವಿಷ್ಯದ ಬಗ್ಗೆ ಆರದ ಆಶಾವಾದದಿಂದ ನುಡಿದಿದ್ದಾರೆ. ನಮಗೆ ಮನವರಿಕೆಯಾಗಬೇಕಿದೆ, 'ಪರಿಸರ ರಕ್ಷಣೆ ನಮ್ಮ ಒಬ್ಬೊಬ್ಬರ ಪ್ರತಿಕ್ಷಣದ ಆಯ್ಕೆಯಲ್ಲಿದೆ'.